ಅಮ್ಮ ಹಾಗೂ ಸರಜಕ್ಕನಿಗೆ ಒಂದು ರೀತಿಯಲ್ಲಿ ಈ ಸಂಬಂಧ ಒಪ್ಪಿತವಾಗಿತ್ತೆಂದೇ ಹೇಳಬೇಕು. ಒಮ್ಮೆ ಅಮ್ಮ ಅಪ್ಪನೊಡನೆ, "ಹುಡುಗ ಇನ್ನೂ ಸಾಣದು. ಸ್ವಲ್ಪ ಅಡಾವುಡಿ ಅದ. ಖರೆ ಥೊಡ್ಡಾಂವಾದ ಮ್ಯಾಲೆ ಶ್ಯಾಣ್ಯಾ ಆಗ್ತಾನ. ಸರಜಕ್ಕನಂಥಾ ಅತ್ತಿ ಸಿಗಬೇಕಾರ ಪುಣ್ಯಾ ಮಾಡಿರಬೇಕು. ನಮಗೂ ಬಾಜೂಕ ಮಗಳಿದ್ದರ ಛೊಲೊ ಅಲ್ಲೇನು" ಎಂದು ಸಣ್ಣಗೆ ಹೇಳಿದ್ದಿತ್ತು. ಅಪ್ಪ ಖಡಾಖಂಡಿತವಾಗಿ, "ನೀ ಇಲ್ಲದ್ದ ತಲ್ಯಾಗ ಹಾಕ್ಕೊಂಡು ಅಕಿಗೂ ತಲ್ಯಾಗ ತುಂಬಬ್ಯಾಡಾ. ಹುಡುಗ ವಾತ್ರಟ ಅದ... ಅಪ್ಪನ ಗತೇನ. ಬರೇ ಒಣಾ ಥೊಡ್ಡಿಸ್ತನಾ... ಗಪ್ಪ ಕೂಡು" ಎಂದು ಬೈದಿದ್ದರು. ನಾನೂ ಮನಸ್ಸಿಗೆ ತಿಳಿ ಹೇಳಲೆತ್ನಿಸಿದ್ದೆ. ಅದು ಕೇಳಿದರೆ ತಾನೇ...

ಬದುಕಿನ ಪುಸ್ತಕವೇ ಹಾಗೆ. ನಿಮಗಿಷ್ಟವಿರಲಿ... ಬಿಡಲಿ... ಪುಟಗಳು ತೆರೆಯುತ್ತಲೇ ಹೋಗುತ್ತವೆ. ನೀವಲ್ಲಿ ಬರೆಯುತ್ತಲೇ ಹೋಗಬೇಕು. ಒಂದೊಂದೇ ಹಂತಗಳು ದಾಟುತ್ತಾ ಹೋದವು. ಸುಮತಿ, ವಸುಮತಿಯರ ಮಂಗಳಗೌರಿ ಪೂಜೆ, ಬಾಗಿನ, ಮೊದಲ ದೀಪಾವಳಿ, ಕುಬುಸ, ಬಾಣಂತನ, ನಾಮಕರಣ ಇತ್ಯಾದಿಗಳು ಸಾಂಗವಾಗಿ ಜರುಗಿದವು. ಸರಜಕ್ಕನಿಗೆ ತುರಿಸಿಕೊಳ್ಳಲೂ ಪುರುಸೊತ್ತಿಲ್ಲ. ಅಮ್ಮನ ಸಹಾಯ ಹಸ್ತವಿದ್ದೇ ಇತ್ತು. ವಸುಮತಿಗೆ ಹೆಣ್ಣು ಮಗುವಾಗಿ ನಾಮಕರಣ ಮುಗಿಸಿ ಕಳಿಸಿಕೊಟ್ಟು 'ಉಶ್' ಎಂದು ಉಸಿರು ಬಿಟ್ಟರು. ಆಗಲೇ ರವಿಗೆ ಎಲ್.ಐ.ಸಿ.ಯಲ್ಲಿ ನೌಕರಿಯಾಯಿತು. ಸರಜಕ್ಕನೊಂದಿಗೆ ಅಮ್ಮನೂ ಖುಷಿಪಟ್ಟು ಅವನ ಬಾಯಲ್ಲಿ ಬೇಸನ್ ಉಂಡಿ ಹಾಕಿ ಬಂದಿದ್ದಳು. ಮುಂದೆ ಕೆಲವೇ ದಿನಗಳಲ್ಲಿ ಗುರಣ್ಣನಿಗೂ ಸ್ಟೇಟ್ ಬ್ಯಾಂಕಿನಲ್ಲಿ ಕೆಲಸವಾಗಿತ್ತು. ಸರಜಕ್ಕ ಸಂತಸದಿಂದ ಕೊಬ್ಬರಿ ವಡಿ ತಂದಿದ್ದರು. ಮೊದಲ ಪೋಸ್ಟಿಂಗ್ ಎಂದು ಅವನು ಅಥಣಿಗೆ ಹೊರಟು ನಿಂತಾಗ ನಿಜಕ್ಕೂ ತಳಮಳವಾಗಿತ್ತು. ಅಮ್ಮ ಚಟ್ನಿಪುಡಿ, ಉಪ್ಪಿನಕಾಯಿ... ಎಲ್ಲ ಕಟ್ಟಿಕೊಟ್ಟು ಬಾಯಲ್ಲಿ ಸೆರಗು ತುಂಬಿ, "ಕಾಳಜಿ ತೊಗೊ ಬಾಳಾ" ಎಂದು ಅತ್ತರೆ ಅಪ್ಪ ಮೌನವಾಗಿ ಬೀಳ್ಕೊಟ್ಟಿದ್ದರು. ಸರಜಕ್ಕ, "ಅಂವೇನು ಯುದ್ಧಕ್ಕ ಹೊಂಟಾನೇನು... ಮತ್ತ ಶನಿವಾರ ಅನ್ನೋದ್ರಾಗ ಮನ್ಯಾಗ ಇರ್ತಾನ. ಅಳಬ್ಯಾಡ್ರಿ" ಎಂದು ಸಂತೈಸಿದ್ದರು. ನಾನೂ ಕಣ್ಣು ಹರಿಸಿದ್ದೆ. ರವಿ ಕಳಿಸಲು ಹೊರಟಿದ್ದ. ಆಗಲೇ ಚಂದ್ರು, "ಗುರಣ್ಣ, ನೀ ಏನ ಕಾಳಜಿ ಮಾಡಬ್ಯಾಡ. ಏನ ಬೇಕಾದ್ರೂ ನಾ ತಂದುಕೊಡ್ತೇನಿ. ನೋಡ್ಕೋತೇನಿ" ಎಂದು ಹಿರಿಯನಂತೆ ಹೇಳಿದಾಗ ಎಲ್ಲರೂ ದುಗುಡ ಮರೆತು ನಕ್ಕಿದ್ದೆವು.

ಎರಡು ವರ್ಷಗಳು ಕಳೆದಿದ್ದವು. ಗುರಣ್ಣ ಅಲ್ಲಿಗೆ ಹೊಂದಿಕೊಂಡರೆ ರವಿ ಕೂಡ ತನ್ನ ನೌಕರಿಯಲ್ಲಿ ಮಗ್ನನಾಗಿದ್ದ. ಇಬ್ಬರು ಹೆಣ್ಣುಮಕ್ಕಳ ಮದುವೆಯಲ್ಲೂ ಯಾವುದೇ ಜವಾಬ್ದಾರಿ ತೆಗೆದುಕೊಳ್ಳದ ಪಾಟೀಲರು ರವಿಯ ಮದುವೆಗೆ ಆತುರ ತೋರಲಾರಂಭಿಸಿದರು. ದೂರದ ನೆಂಟಸ್ಥಿಕೆಯಲ್ಲಿ ಶ್ರೀಮಂತ ಹುಡುಗಿಯ ಸಂಬಂಧ ಹೊಂದಿಸಿದರು. ಪ್ರೈವೇಟ್ ಉದ್ಯೋಗದಲ್ಲಿದ್ದ ಹುಡುಗಿ ನೋಡಲು ಸುಮಾರಾಗಿದ್ದಳು. ಸರಜಕ್ಕನಿಗಷ್ಟೇ ಅಲ್ಲ... ಹುಡುಗಿ ರವಿಗೂ ಇಷ್ಟವಾಗಲಿಲ್ಲ. ಅವನು ತಾಯಿಯಂತೇ ಚೆಲುವ. ಜೋಡಿಗೆ ಸಾಮ್ಯತೆಯೇ ಇರಲಿಲ್ಲ. ಆದರೆ ಪಾಟೀಲರು, "ನಾ ವಚನಾ ಕೊಟ್ಟೇನಿ ಅವರಪ್ಪಗ... ಈ ಮದವಿ ಆಗೇ ತೀರಬೇಕು" ಎಂದು ಹಟ ಹಿಡಿದರು. ಸರಜಕ್ಕ ತೆಪ್ಪಗಾದರೆ ರವಿ ಮೌನವಾದ. ಮದುವೆ ಅದ್ದೂರಿಯಾಗಿ ನಡೆದು ನಳಿನಿ ಮನೆ ತುಂಬಿದಳು. ಮನೆ ತುಂಬಿದ್ದಷ್ಟೇ... ಮನ ತುಂಬಲಿಲ್ಲ. ಮೊದಲಿನಿಂದಲೂ ಹೊಂದಾಣಿಕೆ ಮೂಡಲೇ ಇಲ್ಲ. "ನಾ ನೌಕರಿ ಮಾಡಾಕಿ. ನನಗ ಮನಿ ಕೆಲಸಾ ರೂಢಿ ಇಲ್ಲಾ" ಎಂಬ ನುಡಿಮುತ್ತು ಬಂದ ಮೂರನೇ ದಿನವೇ ಉದುರಿತ್ತು. ನಿಧಾನವಾಗಿ, "ನನ್ನ ನೌಕರಿಗೆ ಧೂರ ಆಗ್ತದ" ಎಂಬ ತಗಾದೆ ಆರಂಭವಾಯಿತು. ಮನೆಯಲ್ಲಿ ನಡೆಯುತ್ತಿದ್ದ ಸಂಘರ್ಷವನ್ನು ಅಮ್ಮನೊಂದಿಗೆ ಹೇಳಿ ಅಳುತ್ತಿದ್ದರು ಸರಜಕ್ಕ. ಆದರೂ ಹಬ್ಬಗಳು ಆರಂಭವಾದ ನಂತರ ಮೊದಲ ವರ್ಷವೆಂದು ಹೇಳಿಕೊಡಲಾರಂಭಿಸಿದರೆ, "ಯಾ ಪರಿ ಮಡಿ...